ಮಾನವನು ಆ ಶಕ್ತಿಗೆ ಸದಾ ಶರಣಾಗಿರಬೇಕು.

ನಮ್ಮ ನಿತ್ಯ ಜೀವನದಲ್ಲಿ ಮನುಷ್ಯ ಪ್ರಯತ್ನವೇ ಪ್ರಾಮುಖ್ಯವಾದುದೆಂದು ಭಾವಿಸದೇ ದೈವೀಕೃಪೆಯು ಅವಶ್ಯವಾಗಿರಬೇಕಾದದ್ದು ಎಂಬುದನ್ನು ನಂಬಲೇಬೇಕು. ಜಗನ್ನಿಯಾಮಕನ ಆಜ್ಞಾಧಾರಿಗಳಾದ ನಮಗೆ ಯಾವ ಸ್ವಾತಂತ್ರ್ಯವೂ ಇಲ್ಲಾ. ತಿಳಿಗೇಡಿಗಳಾದ ನಾವು ಸ್ವತಂತ್ರರು ನಮ್ಮ ನಿಯಾಮಕರು ಯಾರೂ ಇಲ್ಲಾ ಎಂದು ತಿಳಿದು ದುರಭಿಮಾನಿಗಳಾಗಿ,ಜನ್ಮಾಂತರದ ಸುಕೃತದಿಂದ ದೇವರು ದಯಪಾಲಿಸಿದ ತಮ್ಮ ಸಾಮರ್ಥ್ಯವನ್ನು ದುರುಪಯೋಗ ಮಾಡಿಕೊಂಡು ಕಾಲ ಕಳೆಯುವುದು ನಮ್ಮ ಕರ್ತವ್ಯವಲ್ಲ. ಇದನ್ನು ಎಲ್ಲರೂ ತಿಳಿದಿರಬೇಕು.

ದೇವತಾ ಶಕ್ತಿಯ ಅನುಗ್ರಹ ನಿಗ್ರಹಗಳು ಮಾನವನ ಜೀವನದಲ್ಲಿ ಬಹುದೊಡ್ಡ ಪರಿಣಾಮವನ್ನು ಉಂಟುಮಾಡುತ್ತವೆ. ಹಾಗಾಗಿ ಮಾನವನು ಆ ಶಕ್ತಿಗೆ ಸದಾ ಶರಣಾಗಿರಬೇಕು. ಅನುಗ್ರಹ ಸಂಪಾದಿಸಲು ಆ ಶಕ್ತಿಯ ಬೇರೆ ಬೇರೆ ನಾಮ ರೂಪ ಕ್ರಿಯೆಗಳಿಂದ ಆರಾಧಿಸಬೇಕು. ಪವಿತ್ರವಾದ ಅಂತಃಕರಣ,ಜಾಗೃತವಾದ, ಕರ್ತವ್ಯ ನಿಷ್ಠೆ ಇವು ನಮ್ಮ ದೇವತಾ ಭಾವವನ್ನು ವಿಕಾಸಗೊಳಿಸುತ್ತದೆ.

-ಪರಮ ಪೂಜ್ಯ ಶ್ರೀ ಸರ್ವಜ್ಞೇಂದ್ರ ಸರಸ್ವತೀ ಮಹಾಸ್ವಾಮಿಗಳು
ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ

ಗ್ರಂಥ ಋಣ: ದಿವ್ಯ ದರ್ಶನ